# 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

## Spl. C. No. 23 /2014

| | | |
|---|---|---|
| ಹೆಸರು | ಚಂದ್ರಶೇಖರಯ್ಯ | ಪ್ರಾಸಾ.2 |
| ತಂದೆಯ ಹೆಸರು | ರಂಗಪ್ಪ | ಚಾಸಾ.2 |
| ವಯಸ್ಸು | 71 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಯನ್ ಹೊಸಳ್ಳಿ | |

**ದಿನಾಂಕಃ 20.02.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ವಿಶೇಷ ಅಭಿಯೋಜಕರು ಜಿ ಯು ರವರಿಂದಃ**

ಆರೋಪಿತರು ಗೊತ್ತು. ಸುರುಪರರವರು ಅವರ ಜಮೀನಿಗೆ ಲಕ್ಷ್ಮಯ್ಯ ಎಂಬುವವನ್ನು ನಾನೇ ಕೆಲಸಕ್ಕೆ ನೇಮಿಸಿಕೊಟ್ಟಿದ್ದೆ. ನನ್ನ ಜಮೀನು ಅದೇ ಸರ್ವೆ ನಂಬರ್‌ನಲ್ಲಿದೆ. ನಾನು ಹೋಗುತ್ತಿದ್ದಾಗ ಸುಮಾರು 5- 6 ವರ್ಷಗಳ ಹಿಂದೆ ಜಮೀನಿಗೆ ಹೋಗುತ್ತಿದ್ದಾಗ ಗಲಾಟೆ ಆಗುತ್ತಿತ್ತು. ನಾನು ಹೋದಾಗ ಗಲಾಟೆ ನಡೆಯುತ್ತಿತ್ತು. ಮಹದೇವಯ್ಯಎಂಬುವವರು ಗಳವನ್ನು ತೆಗೆದುಕೊಂಡು ಕಾಯಿ ಕೀಳಲು ಹೋಗುತ್ತಿದ್ದರು. ಲಕ್ಷ್ಮಯ್ಯಅವರನ್ನು ತಡೆಯಲು ಹೋದ. ಅವರು ಕೈನಲ್ಲಿ ಎದೆ  ಭಾಗಕ್ಕೆ ಒದೆ ಕೊಟ್ಟರು. ಲಕ್ಷ್ಮಯ್ಯ ಬಿದ್ದು ಹೋದ. ತಾಯಿ ಮತ್ತು ಇಬ್ಬರು ಮಕ್ಕಳು ಬಂದು ಅವನನ್ನು ತುಳಿದು ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾದಿನ ನನ್ನ ಮಗನೇ ಎಂದು ಬೈದರು. ನಾನು ಅಲ್ಲಿದ್ದೆ. ಅಕ್ಕಪಕ್ಕದವರು ಯಾರು ಎಂದು ಗೊತ್ತಿಲ್ಲ ಅವರು ಬಂದು ಬಿಡಿಸಿದರು. ನಾನು ಬಸ್ಸಿನಲ್ಲಿ

ಲಕ್ಷ್ಮಯ್ಯನನನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿ ಸುರಪುರರವರಿಗೆ ಫೋನು ಮಾಡಿದೆ. ಅವರು ಬಂದು ಚಿಕಿತ್ಸೆ ಕೊಡಿಸಿದರು. ನಾನು ಮನೆಗೆ ಹೋದೆ. ಸಾಕ್ಷಿಯು ಮೂ ಮಾ 1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ. ಅವುಗಳು ಸುರುಪರದವರ ತೋಟಕ್ಕೆ ಸೇರಿದ್ದಾಗಿರುತ್ತದೆ.

**ಪಾಟೀಸವಾಲು ಶ್ರೀ ಎ ಆರ್ ಯು ವಕೀಲರಿಂದ**

ನಮ್ಮ ಊರಿನಿಂದ ಬಿಸಿ ಕಾವಲ್‌ಗೆ ಸುಮಾರು 15 ಕಿಮಿ ದೂರವಾಗುತ್ತದೆ. ಬಿಸಿ ಕಾವಲ್‌ನಲ್ಲಿ ನನಗೆ ಸೇರಿದ ಜಮಿನಿನ ಸರ್ವೆ ನಂ 47 ಆಗಿರುತ್ತದೆ. ನನ್ನ ಬಳಿ ಸರ್ವೆ ನಂ. 47 ನನಗೆ ಸೇರಿದ್ದು ಎಂದು ತೋರಿಸಲು ದಾಖಲೆಗಳು ಇವೆ. ಸುರುಪುರವರ ತಂದೆ ತಾಯಿಗಳ ಹೆಸರು ನನಗೆ ಗೊತ್ತಿಲ್ಲ, ಸುರುಪುರರವರ ಊರು ಗೊತ್ತಿಲ್ಲ, ಆದರೆ ಅವರು ರಾಯಚೂರು ಜಿಲ್ಲೆಯವರು. ಸುರುಪುರರಿಗೆ ತುಮಕೂರಿನಲ್ಲಿ ಸಂಬಂಧಿಕರು ಇರುವ ಬಗ್ಗೆ ನನಗೆ ಗೊತ್ತಿಲ್ಲ, ನನಗಿರು. ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿಯಲ್ಲ, ನಾನು ಬಿಪಿ ಮತ್ತು ಸಕ್ಕರೆ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದೇನೆಂದರೆ ಸರಿಯಲ್ಲ, ಸಕ್ಕರೆಕಾಯಿಲೆಗೆ ಮಾತ್ರ ಚಿಕಿತ್ಸೆ ಪಡೆಯುತ್ತಿದ್ದೇನೆ. ನನಗೆ ಸಕ್ಕರೆ ಕಾಯಿಲೆ ಇರುವುದರಿಂದ ಸರಿಯಾದಾ ಸಮಯಕ್ಕೆ ಊಟ ತಿಂಡಿ ತಿನ್ನಲು ನಿಮಗೆ ವೈದ್ಯರು ಹೇಳಿದ್ದಾರೆಂದು ಪ್ರಶ್ನಿಸಲಾಗಿ ಸಾಕ್ಷಿ ನಾನು ಅದನ್ನು ಪಾಲಿಸುತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಕಾಯಿಲೆ ಇರುವುದರಿಂದ 10 ಗಂಟೆಗೊ ಮೊದಲು ಮನೆಯಿಂದ ಆಚೆಗೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಯ್ಯ ನಮ್ಮ ಪಕ್ಕದ ಊರಿನವರು. ಲಕ್ಷ್ಮಯ್ಯನ ತಂದೆಯ ಹೆಸರು ಹನುಮಯ್ಯ. ನಾನು ಯಾವ ದಿನಾಂಕಂದು ಲಕ್ಷ್ಮಯ್ಯನನನ್ನು ಸುರುಪರರವರ ತೋಟಕ್ಕೆ ಕೆಲಸಕ್ಕೆ ಕಳಿಸಿದ್ದೆ ಎಂದು ಹೇಳಲು ನನಗೆ ನೆನಪು ಇಲ್ಲ. ಪ್ರಾಸಾ1ರವರು ಚಾಸಾ.6ರವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ. ಸುರುಪುರ ಮತ್ತು ಇತರರು ಸರ್ವೆ ನಂ 158ರಲ್ಲಿ ಆರೋಪಿತರಿಗೆ ಸೇರಿದ ಮನೆ ಕಿತ್ತುಹಾಕಿದ ಬಗ್ಗೆ ತುರುವೇಕೆರೆ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಸಿಸಿ 30/13 ರಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಕಾಯಿಕೀಳುತ್ತಿದ್ದ ಅಕ್ಕಪಕ್ಕ ಒಂದು ಪಾಳು ಮನೆ ಇತ್ತು. ಒಂದು ನೀರಿನ ತೊಟ್ಟಿಇತ್ತು. ಲಕ್ಷ್ಮಯ್ಯ ಕಟ್ಟಿದ ಗುಡಿಸಲು ಇತ್ತು. ಈಗ ಆಸ್ಥಳದಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲ. ನಾನು 5-6 ವರ್ಷದಿಂದ ಆ ಸ್ಥಳಕ್ಕೆ ಹೋಗಿಲ್ಲ. ಗಲಾಟೆ ನಡೆಯಿತು ಎಂದು ಹೇಳುವ ದಿನವನ್ನು ಹೊರತುಪಡಿಸಿ ನಾನು ಪೊಲೀಸರ ಜೊತೆ ಒಮ್ಮೆ ಹೋಗಿದ್ದೆ. ನಂತರ ಆ ಸ್ಥಳಕ್ಕೆ ನಾನು ಹೋಗಿಲ್ಲ. ನನಗೆ ಪೊಲೀಸರು ಲಿಖಿತವಾಗಿ ನೋಟೀಸು ನೀಡಿಲ್ಲ. ಪೊಲೀಸರು ದಂಡಿನ ಶಿವರ ಠಾಣೆಯಲ್ಲಿ ನನ್ನ ಸಹಿಯನ್ನು ಪಡೆದುಕೊಂಡರು. ನಂತರ ಸ್ಥಳಕ್ಕೆ ಕರೆದುಕೊಂಡು ಹೋದರು. ಪೊಲೀಸ್ ಠಾಣೆಯಲ್ಲೇ ಬರೆದರು ಎಂದರೆಸ ರಿಯಲ್ಲ. ನನ್ನನ್ನು ಕರೆದುಕೊಂಡು ಹೋದ ಸ್ಥಳದಲ್ಲಿ ಬರೆದರು. ನನ್ನ ಜಮೀನಿಗೂ ಸರ್ವೆನಂ 158ರ ಜಮೀನಿನ ನಡುವೆ ಕಾಡು ಗಿಡಗಳು ಬಹಳಷ್ಟು ಬೆಳೆದಿವೆ ಎಂದರೆ ಸರಿ. ಒಂದು ಜಮೀನಿನಲ್ಲಿ ನಿಂತುಕೊಂಡರೆ ಇನ್ನೊಂದು ಜಮೀನಿನಲ್ಲಿ ನಿಂತುಕೊಂಡರೆ ಏನು ನಡೆಯುತ್ತಿದೆ ಎಂದು ಕಾಣುವುದಿಲ್ಲ ಎಂದರೆ

ಸರಿ. ಸಾಕ್ಷಿ ಮುಂದುವರೆದು ದಾರಿ ಇದೆ ಎಂದು ನುಡಿಯುುತ್ತಾರೆ. ಎಲ್ಲರೂ ಕೈಗಳಲ್ಲಿ ಲಕ್ಷ್ಮಯ್ಯನಿಗೆ ಹೊಡೆದರು. ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ6ರವರ ಮಾತುಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಹಜರ್ ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಡಿವೈ ಎಸ್ ಪಿ ಆಫೀಸ್‌ನವರು ಬರೆದರು. ಅವರ ಜೊತೆ ಯಾರು ಬಂದಿದ್ದರು ಎಂದು ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. 2ರಿಂದ 5 ಗಂಟೆಯ ವರೆಗೆ ಬರವಣಿಗೆ ಆಗಿದೆ. ಪಂಚನಾಮೆಯಲ್ಲಿ 35 ಅಡಿಗಳ ಅಂತರದಲ್ಲಿ ದನಗಳನ್ನು ಕಟ್ಟುವ ಗುಡಿಸಲು ಮನೆ ಇರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಆ ಸ್ಥಳದಲ್ಲಿ ಆರೋಪಿಗಳು ಎಮ್ಮೆ ಮತ್ತು ಹಸುಗಳನ್ನು ಕಟ್ಟಲು ಉಪಯೋಗಿಸುತ್ತಾರೆಂದು ಪ್ರಶ್ನಿಸಲಾಗಿ ಸಾಕ್ಷಿಯು ಆ ದಿನ ಎಮ್ಮೆ ಮತ್ತು ಹಸುಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಮೂ ಮಾ1 ಮತ್ತು 2ನ್ನು ಪೊಲೀಸರು ತೆಗೆದುಕೊಂಡು ಬಂದರು. ಮೂಮಾ 1 ಮತ್ತು 2 ತೆಗೆದುಕೊಂಡ ಜಾಗದ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನನ್ನನ್ನು ಹೊರತು ಪಡಿಸಿ ಬೇರೆ ಜನರು ಅಲ್ಲಿಗೆ ಬಂದಿದ್ದರು. ಆರೋಪಿಗಳಿಗೆ ಸೇರಿದ್ದ ಜಮೀನನ್ನು ಹೊಡೆದುಕೊಳ್ಳಲು ಪರಿಶಿಷ್ಟ ಜಾತಿಗೆ ಸೇರಿದ ಲಕ್ಷ್ಮಯ್ಯನನ್ನು ಮುಂದು ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಯಾವದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಬಿಸಿಕಾವಲ್‌ನಿಂದ ಸಂಪಿಗೆಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ 1 ವರೆ ಕಿಮಿ ದೂರುವಾಗುತ್ತದೆ ಎಂದರೆ ಸರಿ. ಬಿಸಿಕಾವಲ್‌ನಿಂದ ದಂಡಿನಶಿವ ಆಸ್ಪತ್ರೆಗೆ 4 ಕಿ ಮಿ ದೂರವಾಗುತ್ತದೆ ಎಂದರೆ ಸರಿ.

ದಂಡಿನಶಿವ ಆಸ್ಪತ್ರೆ ಮತ್ತು ಪೊಲೀಸ್ ಠಾಣೆ ಹತ್ತಿರದಲ್ಲಿದೆ ಎಂದರೆ ಸರಿ. ತುಮಕೂರು ಆಸ್ಪತ್ರೆಗೆ ಪ್ರಾಸಾ.1ರವರನ್ನು ನಾನೇ ಕರೆದುಕೊಂಡು ಹೋಗಿದ್ದೇನೆ. ಅವರನ್ನು ಆಸ್ಪತ್ರೆಗೆ ನಾನೇ ದಾಖಲಿಸಿದ್ದೇನೆ. ನಾನು ಪೊಲೀಸರಿಗೆ ಈ ಬಗ್ಗೆ ಹೇಳಿಕೆನೀಡಿಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.